ದಿನಾಂಕಃ 26.07.2017 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ ಎಸ್‌ಟಿಪಿ ವಕೀಲರಿಂದ

ಕಡಹಳ್ಳಿ ಜಮೀನು ದೇಸಾಯಿಯವರ ಜಮೀನು ಎಂದರೆ ಸರಿ. ರಿ.ಸ ನಂ. 43ಃ7 ಇದ್ದು, ಒಟ್ಟು 3 ಎಕರೆ 31 ಗುಂಟೆ ಇರುತ್ತದೆ. ಸಂಪೂರ್ಣ ಆಸ್ತಿಯಲ್ಲಿ ಮನೆ ಕಟ್ಟಿರುವುದಿಲ್ಲ. 1 ಎಕರೆ 10 ಗುಂಟೆಯಲ್ಲಿ ಮನೆ ಕಟ್ಟಿರುತ್ತಾರೆ. ಕಡಹಳ್ಳಿ ಜನರು ಆ ಆಸ್ತಿಯಲ್ಲಿ 40-45 ವರ್ಷಗಳ ಹಿಂದೆ ಮನೆ ಕಟ್ಟಿದ್ದರು ಎಂದರೆ 1 ಎಕರೆ 10 ಗುಂಟೆಯಲ್ಲಿ ಇರುವುದಿಲ್ಲ. ಉಳಿದ ಆಸ್ತಿಯಲ್ಲಿ ಇರುತ್ತಾರೆ ಎನ್ನುತ್ತಾರೆ. ಉತಾರದ ಕಾಲಂ ನಂ. 12 ರಲ್ಲಿ ಪ್ರತಿ ವರ್ಷವೂ ವ್ಯವಸಾಯದ ಬಗ್ಗೆ ನಮೂದು ಮಾಡುತ್ತಾರೆ ಎಂದರೆ ಸರಿ. ದಾವಾ ಆಸ್ತಿಯು ನನ್ನ ದೊಡ್ಡಪ್ಪನಿಂದ ನನ್ನ ತಂದೆಗೆ ಬಂದಿರುತ್ತದೆ. ಸದರಿ ಆಸ್ತಿಯು ಭೂನ್ಯಾಯಮಂಡಳಿಯಿಂದ ಮಂಜೂರಾದ ಆಸ್ತಿ ಎಂದರೆ ಸರಿ. ಆ ಆಸ್ತಿಯಲ್ಲಿ ಪಡಾ ಜಾಗ ಬಿದ ಕಾರಣ ನನಗಾಗಲೀ ಅಥವಾ ನನ್ನ ತಂದೆಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ನಮೂದು ಮೊದಲು ನಮ್ಮ ದೊಡ್ಡಪ್ಪ ಹೆಸರಿನಲ್ಲಿ ಇದ್ದು ನಂತರ ನಮ್ಮ ಹೆಸರಿಗೆ ಬಂದಿತು. ಮುಂದುವರೆದು ನನ್ನ ದೊಡ್ಡಪ್ಪ ನನಗೆ 1 ಎಕರೆ 10 ಗುಂಟೆ ಆಸ್ತಿಯನ್ನು ನಮಗೆ ಬಿಟ್ಟುಕೊಟ್ಟಿದ್ದರು. ಹಕ್ಕುಬಿಟ್ಟು ಕೊಟ್ಟ ಬಗ್ಗೆ ಯಾವುದೇ ನೊಂದಾವಣಿ ಕಾಗದ ಇರುವುದಿಲ್ಲ. ದೊಡ್ಡಪ್ಪನ ಜೊತೆ ವ್ಯವಸಾಯ ಮಾಡುತ್ತೇನೆ ಎನ್ನುತ್ತಾರೆ. ಬಸನಗೌಡ ನಿಂಗನಗೌಡ ಮರಿಯಪ್ಪನವರ ದೊಡ್ಡಪ್ಪ. ಚನ್ನಬಸನಗೌಡ, ಚಂದ್ರಗೌಡ, ಯಲ್ಲನಗೌಡ ಅಂದರೆ ನನ್ನ ತಮ್ಮಂದಿರು. ಶಿವನಗೌಡ ಮಲ್ಲನಗೌಡ ಮರಿಯನಗೌಡ ನನ್ನ ಚಿಕ್ಕಪ್ಪ. 1 ಎಕರೆ 10 ಗುಂಟೆ ಆಸ್ತಿಯಲ್ಲಿ ಈ ಮೇಲೆ ಹೇಳಿದ 3 ಹೆಸರುಗಳು ಸಾಮಾಹಿಕವಾಗಿ ಇವೆ ಎಂದರೆ ಸರಿ. ಉಳಿದ ಆಸ್ತಿಗಳು ಸಹ ನಮ್ಮ ಮತೆನತಕ್ಕೆ ಇದ್ದು, ಅವುಗಳನ್ನು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೊರಿಕೆಯ ಮೇರೆಗೆ ಪಾಟಿ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.